
# ಜಾಗತಿಕ ಸಂದರ್ಭದಲ್ಲಿ ಶ್ರೀರಾಮಕೃಷ್ಣರ ಪಾತ್ರ

ಸ್ವಾಮಿ ಕರುಣಾಕರಾನಂದ

## ಭೌತಿಕ ಜ್ಞಾನದ ಇತಿ-ಮಿತಿ

ಇಂದಿನ ಜಾಗತಿಕ ಯುಗದಲ್ಲಿ ಯಾವುದೇ ಒಂದು ದೇಶವೂ ತನ್ನ ಏಕಮುಖೀ ಸಂಸ್ಕೃತಿಯನ್ನು ಉಳಿಸಿಕೊಂಡಿಲ್ಲ ಎಂದೇ ಹೇಳಬೇಕು. ಕ್ಷಿಪ್ರಗತಿಯ ಸಂವಹನ ಸಾಧನಗಳ ಆವಿಷ್ಕಾರದ ನಂತರ ಜಗತ್ತಿನ ಜನರಲ್ಲಿ ಪರಸ್ಪರ ಕೊಡು ಕೊಳ್ಳುವಿಕೆ ಹಿಂದೆಂದಿಗಿಂತಲೂ ಹೆಚ್ಚಿದೆ. ಜನರು ಪರಸ್ಪರ ವಿಚಾರಗಳ, ಸಂಸ್ಕೃತಿಗಳ, ಭೋಗವಸ್ತುಗಳ ಉದಾರ ವಿನಿಮಯ ಮಾಡಿಕೊಳ್ಳುತ್ತಿದ್ದಾರೆ. ದಿನೇ ದಿನೇ ಜಗತ್ತು ಕಿರಿದಾಗುತ್ತಿದೆ. ಆದರೆ ಮನುಷ್ಯನ ಜ್ಞಾನದಾಹವೇನೂ ಕಡಮೆಯಾಗಿಲ್ಲ. ಅವನ "ಏನು, ಏಕೆ, ಹೇಗೆ" ಗಳೆಂಬ ಪ್ರಶ್ನೆಗಳು ಪ್ರತಿಯೊಂದು ವಸ್ತುವನ್ನೂ, ವಿಷಯವನ್ನೂ ಬಗೆದು ವಿಚಾರಿಸಿ ಜ್ಞಾನದ ಕಡಲನ್ನೇ ಸೃಷ್ಟಿಸಿಬಿಟ್ಟಿವೆ. ಯಾವ ವಿಷಯವನ್ನು ತೆಗೆದು ಕೊಂಡರೂ ಅದರಲ್ಲಿ ನೈಪುಣ್ಯತೆ (specialization) ಸಾಧಿಸುವುದೇ ಇಂದಿನ ಜ್ಞಾನಾರ್ಜನೆಯ ಗುರಿಯಾಗಿದೆ. ಹೀಗಾಗಿ ಸಹಜವಾಗಿಯೇ ಮಾನವನಿಗೆ ತಾನು ಎಲ್ಲವನ್ನೂ ತಿಳಿದುಕೊಳ್ಳಬಲ್ಲೆನೆಂಬ ನಂಬಿಕೆ ನುಚ್ಚುನೂರಾಗಿದೆ. ಆದರೂ ಆತನ ಜ್ಞಾನದಾಹ ಮತ್ತಷ್ಟು ಹೆಚ್ಚುತ್ತಲೇ ಹೋಗುತ್ತಿದೆ. ಉಪನಿಷತ್ತಿನ ಋಷಿಗಳು ಇದಕ್ಕೆ ಹಿಂದೆಯೇ ಉತ್ತರವನ್ನು ಕಂಡುಹಿಡಿದಿದ್ದರು. ತಮ್ಮ ಜ್ಞಾನಸಂಪಾದನೆಯ ಹಾದಿಯಲ್ಲಿ ಭೌತಿಕ ವಸ್ತುಗಳ ಹಾಗೂ ಸೂಕ್ಷ್ಮವಸ್ತುಗಳ ಕೂಲಂಕಷ ಪರೀಕ್ಷೆಯಿಂದ ಜ್ಞಾನರಾಶಿಯನ್ನೇ ತಮ್ಮ ಹೃದಯದಲ್ಲಿ ಕಂಡು ಕೊಂಡಿದ್ದರೂ ಅವರ ಮನಸ್ಸು ಎಲ್ಲವನ್ನೂ ಅರಿತುಕೊಂಡು ಬಿಡಬೇಕೆಂದು ಹಾತೊರೆಯಿತು. ಆ ಪ್ರಶ್ನೆಯನ್ನೇ ಮುಂಡಕ ಉಪನಿಷತ್ತಿನಲ್ಲಿ ಒಬ್ಬ ವಿದ್ಯಾರ್ಥಿಯು ತನ್ನ ಗುರುವಿಗೆ ಕೇಳು ತ್ತಾನೆ – **'ಕಸ್ಮಿನ್ನು ಭಗವೋ ವಿಜ್ಞಾತೇ ಸರ್ವಮಿದಂ ವಿಜ್ಞಾತಂ ಭವತೀತಿ'** (ಮುಂಡಕೋಪನಿಷತ್ತು ೧.೧.೩). ಒಂದೊಂದನ್ನೂ ಆಮೂಲಾಗ್ರವಾಗಿ ತಿಳಿಯುತ್ತ ಹೋದರೆ ನಮ್ಮ ಸಂಪೂರ್ಣ ಆಯುಸ್ಸೇ ಸಾಕಾಗುವುದಿಲ್ಲವಾದ್ದರಿಂದ, ಯಾವುದಾದರೂ ಒಂದನ್ನು ಅರಿತುಕೊಳ್ಳುವುದರಿಂದ ಎಲ್ಲವನ್ನೂ ಅರಿತುಕೊಳ್ಳಲು ಸಾಧ್ಯವೇ ಎಂಬುದೇ ಶಿಷ್ಯನ ಆ ಪ್ರಶ್ನೆಯ ಆಶಯ. ಅದಕ್ಕೆ ಉತ್ತರವಾಗಿ ಗುರುವು ಎರಡು ರೀತಿಯ ವಿದ್ಯೆಗಳ ಪ್ರಸ್ತಾವನೆಯನ್ನು ಮಾಡುತ್ತಾರೆ. ಒಂದು ಪ್ರತಿಯೊಂದು ವಸ್ತುವಿನ ಭೌತಸ್ವರೂಪ ವನ್ನು ಅರಿಯುವ **ಲೌಕಿಕ ಜ್ಞಾನ**ವಾದರೆ, ಇನ್ನೊಂದು ಆ ವಸ್ತುಗಳ ಪಾರಮಾರ್ಥಿಕ **ಸ್ವರೂಪಜ್ಞಾನ**. ಒಂದನ್ನು ಅಪರಾವಿದ್ಯೆಯೆಂದು ಕರೆಯಬಹುದಾದರೆ, ಇನ್ನೊಂದನ್ನು ಪರಾವಿದ್ಯೆಯೆನ್ನಬಹುದು. ಮೊದಲನೆಯ ವಿದ್ಯೆಯಿಂದ ಮನುಷ್ಯನ ಐಹಿಕ ಹಾಗೂ ಆಮುಷ್ಮಿಕ ಹಿತವಾಗುವುದಾದರೆ, ಎರಡನೆಯದರಿಂದ ಆತನು ಶಾಂತನಾಗುತ್ತಾನೆ, ದುಃಖದಿಂದ ಆತ್ಯಂತಿಕವಾಗಿ ದೂರವಾಗುತ್ತಾನೆ, ಹುಟ್ಟು-ಸಾವುಗಳಿಂದ ವಿಮುಕ್ತನಾಗುತ್ತಾನೆ, ಅಕ್ಷರವನ್ನು (ನಾಶವಾಗ ದಿರುವ ಸ್ಥಿತಿಯನ್ನು) ಹೊಂದುತ್ತಾನೆ.

> ಇಂದಿನ ಜಾಗತಿಕ ಸಂದರ್ಭವು ಅತ್ಯಂತ ಸಂಕೀರ್ಣವಾಗಿದ್ದು, ಈ ಕಾಲದ ಸಮಸ್ಯೆಗಳು ಕೂಡ ಅತ್ಯಂತ ಜಟಿಲವಾಗಿವೆ. ಇಂತಹ ಪರಿಸ್ಥಿತಿಯಲ್ಲಿ ಶ್ರೀರಾಮಕೃಷ್ಣರ ಜೀವನ ಮತ್ತು ಸಂದೇಶಗಳ ಪ್ರಸ್ತುತತೆಯನ್ನು ಹಲವು ದೃಷ್ಟಿಗಳಿಂದ ಅರಿಯುವುದು ಅವಶ್ಯವಾಗಿದೆ. ಇಂತಹ ಪ್ರಯತ್ನವನ್ನು ಮಾಡಿರುವ ಪೂಜ್ಯ ಸ್ವಾಮೀಜಿಯವರು ಮೈಸೂರಿನ ರಾಮಕೃಷ್ಣ ನೈತಿಕ ಮತ್ತು ಆಧ್ಯಾತ್ಮಿಕ ಶಿಕ್ಷಣ ಸಂಸ್ಥೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ಈ ಉಪನಿಷತ್ತಿನ ತತ್ತ್ವವನ್ನು ಪುನರುಜ್ಜೀವನಗೊಳಿಸಲೆಂದೇ ಶ್ರೀರಾಮಕೃಷ್ಣರ ಆವಿರ್ಭಾವವಾಯಿತು. ಗದಾಧರನನ್ನು ಕೊಲ್ಕತಾಗೆ ಕರೆತಂದ ಮೇಲೆ ಅಣ್ಣ ರಾಮಕುಮಾರ ತಮ್ಮನಿಗೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಲಹೆ ಕೊಟ್ಟಾಗ ಅವನು ಕೊಟ್ಟ ಉತ್ತರ

> ಆಧುನಿಕ ಭಾರತವು ಸಮುದಾಯ ಅಭಿವೃದ್ಧಿಯಲ್ಲಿ ಮಾಡಿದ ಸಾಧನೆಗಳನ್ನೂ ಮುಂದಿನ ಇತಿಹಾಸವು ದಾಖಲಿಸುವುದು. ಇದರಿಂದ ಸಹಸ್ರ ಸಹಸ್ರ ಗ್ರಾಮಗಳಲ್ಲಿರುವ ರೈತಾಪಿ ಜನಗಳಿಗೆ ಒಳಿತಾಗುವುದು. ತಾವು ಏನನ್ನಾದರೂ ಮಾಡಬಹುದು, ತಮ್ಮ ಸ್ವಪ್ರಯತ್ನದಿಂದ ತಮ್ಮ ಬಾಳನ್ನು ಉತ್ತಮವನ್ನಾಗಿ ಮಾಡಿಕೊಳ್ಳಬಹುದು ಎನ್ನುವ ಆತ್ಮವಿಶ್ವಾಸ ಇದರಿಂದ ಅವರಲ್ಲಿ ಮೂಡುವುದು. ಇಲ್ಲಿ ಬಾಳನ್ನು ಉತ್ತಮಪಡಿಸಿ ಕೊಳ್ಳುವುದೆಂದರೆ, ಕೇವಲ ಭೌತಿಕವಾಗಿ ಅಲ್ಲ, ಆಧ್ಯಾತ್ಮಿಕತೆಯೂ ಶ್ರೇಷ್ಠ ಮಟ್ಟದ್ದಾಗಬೇಕು. ಅದಕ್ಕಾಗಿ ಅವರು ಕಡೆಯ ದಾಗಿ ಧರ್ಮವನ್ನು ಮತ್ತು ಅದರಲ್ಲೂ ಶ್ರೀರಾಮಕೃಷ್ಣರನ್ನು ಆಶ್ರಯಿಸಬೇಕಾಗುತ್ತದೆ.
>
> –ಅರ್ನಾಲ್ಡ್ ಟಾಯ್ನ್‌ಬಿ

ಇದಕ್ಕೆ ಪೂರಕ– "ನನಗೆ ಹಣ ಸಂಪಾದನೆಯ ವಿದ್ಯೆ ಬೇಡವೇ ಬೇಡ. ಯಾವುದರಿಂದ ಮನುಷ್ಯನು ಜ್ಞಾನವನ್ನು ಪಡೆದು ಕೃತಾರ್ಥನಾಗುವನೊ ಅಂಥ ವಿದ್ಯೆ ನನಗೆ ಬೇಕು" (ಶ್ರೀರಾಮಕೃಷ್ಣ ಲೀಲಾಪ್ರಸಂಗ–೧, ಪು. ೧೧೧). ಅಸಾಧಾರಣ ಮೇಧಾವಿಯಾದ ಗದಾಧರ ಅತ್ಯಂತ ಸುಲಭವಾಗಿಯೇ ವಿದ್ಯೆಯನ್ನು ಕಲಿತು ಪಾಂಡಿತ್ಯವನ್ನು ಮೆರೆಸುತ್ತ ಬೇಕಾದಷ್ಟು ಅರ್ಥಸಂಪಾದನೆ ಮಾಡಬಹುದಿತ್ತು. ಆದರೆ ಆತ ಅತ್ಯಂತ ಸೂಕ್ಷ್ಮಮತಿಯೂ ಕೂಡ. "ಕೇವಲ ಸಂಪತ್ತಿನಿಂದ ಜೀವನಕ್ಕೆ ಸುಖಲೇಪವಾಗದು, ನೈಜಸುಖವೆನ್ನುವುದು ಜಗತ್ಕಾರಣವೆಂದು ಕರೆಯಲ್ಪಡುವ ಬ್ರಹ್ಮ ಸ್ವರೂಪವನ್ನು ಅರಿತಾಗಲೇ" ಎಂಬ ಬುದ್ಧಿ ಆತನಲ್ಲಿ ಮೂಡಿತು. ಯಾವುದರಿಂದ ಅಕ್ಷರದ ಪ್ರಾಪ್ತಿಯುಂಟಾಗುವುದೊ ಅದು ಪರಾವಿದ್ಯೆ ಮತ್ತು ಅದೇ ಆಶ್ರಯಿಸಲು ಯೋಗ್ಯವಾದದ್ದು ಎಂಬ ಉಪನಿಷತ್ತಿನ ವಾಣಿಯ ಅನುಷ್ಠಾನವನ್ನು ಶ್ರೀರಾಮ ಕೃಷ್ಣರ ಜೀವನದಲ್ಲಿ ನಾವು ಕಾಣಬಹುದು.

### ಮತಾಂಧತೆಯ ಜಾಗತಿಕ ಪ್ರಸಾರಕ್ಕೆ ದಿವ್ಯೌಷಧ

ಕೆಲವು ಗ್ರಂಥಗಳು, ಕೆಲವು ಚಿಹ್ನೆಗಳು, ಕೆಲವು ಪ್ರಾರ್ಥನಾ ಸ್ಥಳಗಳು, ಕೆಲವು ಬಾಹ್ಯಾಚಾರಗಳು–ಇವುಗಳನ್ನೇ ಧರ್ಮವೆಂದು ತಿಳಿದುಕೊಂಡಿರುವ ಜನರಿಂದ ತಾವು ಆಚರಿಸುತ್ತಿರುವುದು ಮಾತ್ರ ಧರ್ಮ, ಉಳಿದುದೆಲ್ಲ ಧರ್ಮಾಚರಣೆಯಲ್ಲವೆಂಬ ವಿಚಾರಹೀನ ನಂಬಿಕೆಯು ಪ್ರಚಾರವಾಗುತ್ತಿದೆ, ಅನ್ಯಮತದವರ ಹಿಂಸೆ ಯಾಗುತ್ತಿದೆ. ಆಶ್ಚರ್ಯವೆಂದರೆ, ಜ್ಞಾನಕ್ರಾಂತಿಯಾಗುತ್ತಿರುವ ಈ ಯುಗದಲ್ಲಿ, ಒಬ್ಬರನ್ನೊಬ್ಬರು ಸರಿಯಾಗಿ ಅರ್ಥ ಮಾಡಿ ಕೊಂಡು ಶಾಂತಿಯಿಂದ ಸಹಬಾಳ್ವೆ ನಡೆಸಬೇಕಾದ ಸಂದರ್ಭ ದಲ್ಲಿ ಪರಸ್ಪರ ದ್ವೇಷ–ಅಸಹನೆಗಳು ಬೆಳೆಯುತ್ತ ಹೋಗುತ್ತಿವೆ. ಇದಕ್ಕೆ ಕಾರಣ, ನಾವು ಸಂಪಾದಿಸುತ್ತಿರುವ ಜ್ಞಾನ ನಾನಾತ್ವದ ಜ್ಞಾನ. ಉಪನಿಷತ್ತುಗಳು ತಿಳಿಸುತ್ತವೆ, ಎಲ್ಲಿಯವರೆಗೂ ಈ ನಾನಾತ್ವದ ಜ್ಞಾನವಿರುವುದೋ ಅಲ್ಲಿಯವರೆಗೂ ಶಾಂತಿ ದೊರಕದು. ಶ್ರೀರಾಮಕೃಷ್ಣರು ತಾವು ಜನ್ಮ ತಳೆದ ಧರ್ಮವಲ್ಲದೆ ಇತರ ಧರ್ಮಗಳ ಆಚಾರಗಳನ್ನನುಸರಿಸಿ ಅವುಗಳ ಅಂತರ್ಯ ವನ್ನು ಹೊಕ್ಕು ಒಂದೇ ಸತ್ಯವು ವಿವಿಧ ಹೆಸರುಗಳನ್ನು, ವಿವಿಧ ರೂಪಗಳನ್ನು ಹೊಂದುತ್ತದೆ ಎಂಬುದಾಗಿ ಕಂಡುಕೊಂಡು ಜಗತ್ತಿಗೆ ತೋರಿಸಿಕೊಟ್ಟಿದ್ದಾರೆ. ಯಾವಾಗ ಮಾನವನು ಮೊದಲು ಈ ಏಕತ್ವದ ಜ್ಞಾನವನ್ನು ಸಂಪಾದಿಸುವನೊ, ಅದರ ಹಿನ್ನೆಲೆಯಲ್ಲಿ ವಿವಿಧ ಧರ್ಮಗಳು, ವಿವಿಧ ರೀತಿಯ ಮನಸ್ಸುಗಳಿಗೆ ಆ ಒಂದೇ ಸತ್ಯವನ್ನು ಕಾಣಲು ಇರುವ ಸಾಧನಗಳು ಮಾತ್ರವೆಂದು ಅರಿವಿಗೆ ಬರುತ್ತದೆ. ಆಗ, ಆತ ಯಾವ ಮತವನ್ನೂ ತಿರಸ್ಕರಿಸ ಲಾರ. ಅಷ್ಟೆ ಅಲ್ಲ, ಇನ್ನೂ ಹಲವು ಮತಗಳು ಹುಟ್ಟಿ ಬರಲೆಂದು ಹಾರೈಸುತ್ತಾನೆ. ಅವುಗಳನ್ನೂ ತನ್ನ ತೆಕ್ಕೆಗೆ ಸೇರಿಸಿಕೊಳ್ಳುತ್ತಾನೆ. ಆತನಿಗೆ ಭಗವಂತನ ಅನಂತತೆಯನ್ನು ಸೀಮಿತಗೊಳಿಸುವ ಯಾವ ಪ್ರಯತ್ನವೂ ಹಿಡಿಸದು.

ಅದ್ವೈತ ಮತದ ಪ್ರಕಾರ ಏಕಮೇವ ಸತ್ಯದ ಸಾಕ್ಷಾತ್ಕಾರವಾದ ನಂತರವೂ ಶ್ರೀರಾಮಕೃಷ್ಣರು ಬೆಳಿಗ್ಗೆ ಮತ್ತು ಸಂಜೆ ಕೈ ಚಪ್ಪಾಳೆ ತಟ್ಟುತ್ತ ಹರಿನಾಮ ಸಂಕೀರ್ತನೆಯನ್ನು ಮಾಡುತ್ತಿದ್ದುದನ್ನು ಕಂಡ ಅವರ ಗುರು ತೋತಾಪುರಿ, "ಅದೇನು ರೊಟ್ಟಿ ತಟ್ಟು ತ್ತಿರುವೆ!" ಎಂದು ಅವರನ್ನು ಹಾಸ್ಯ ಮಾಡುತ್ತಾರೆ. ಅದಕ್ಕೆ ಅವರು ತಮ್ಮ ತಾಯಿ ಕಾಳಿಯ ಮೂಲಕ ತೋತಾಪುರಿಗೆ ಸಗುಣ ಬ್ರಹ್ಮದ ಸಾಕ್ಷಾತ್ಕಾರವನ್ನೂ ಮಾಡಿಸಿ, ಅವರ ಏಕಮುಖ ಜ್ಞಾನದ ಪರಿಮಿತಿಯನ್ನು ನಿವಾರಿಸುತ್ತಾರೆ. ಶ್ರೀರಾಮಕೃಷ್ಣರೇ ನಂತರ ಹೇಳುತ್ತಾರೆ, "ಅವನನ್ನು ನಿರಾಕಾರನೆಂದು ಭಾವಿಸು ವುದೂ ಸರಿ. ಆದರೆ ಅದೊಂದೇ ಸತ್ಯ, ಉಳಿದವುಗಳೆಲ್ಲ ಮಿಥ್ಯ ಎಂದು ತಿಳಿಯಬೇಡಿ. ಜೋಪಾನವಾಗಿರಿ! ಅವನನ್ನು ಸಾಕಾರ ನೆಂದು ಧ್ಯಾನಿಸುವುದು ಅದರಷ್ಟೆ ಸತ್ಯ. ಆದರೆ ನೀವು ದೇವರನ್ನು ನೋಡುವ ತನಕ ನಿಮ್ಮ ಸಾಕಾರ ಇಷ್ಟದೇವತೆಯನ್ನು ಬಿಡಬೇಡಿ. ಅನಂತರ ಎಲ್ಲವೂ ವಿಶದವಾಗುವುದು", "ದೇವರು ನಿರಾಕಾರ ಮತ್ತು ಸಾಕಾರನೂ ಹೌದು. ಅವನು ಸಾಕಾರ, ನಿರಾಕಾರಗಳನ್ನು ಮೀರಿಯೂ ಇರುವನು. ಅವನು ಇನ್ನೇನೇನು ಆಗಿರುವನೋ ಅವನೊಬ್ಬನಿಗೆ ಗೊತ್ತು", "ದೇವರಿಗೆ ಇರುವ ನಾಮಗಳು ಹಲವು. ಅವನನ್ನು ಕಾಣುವ ರೂಪಗಳು ಅನಂತ. ನೀವು ಅವನನ್ನು ಯಾವ ಹೆಸರಿನ ಮೂಲಕವಾಗಿಯಾದರೂ, ಯಾವ ಆಕಾರದ ಮೂಲಕವಾಗಿಯಾದರೂ ಕಾಣುವಿರಿ." ಪ್ರತಿಯೊಬ್ಬರೂ ತಾವಿರುವ ಧರ್ಮದಲ್ಲಿಯೇ ಇದ್ದುಕೊಂಡು ಸತ್ಯಸಾಕ್ಷಾತ್ಕಾರವನ್ನು ಮಾಡಿಕೊಳ್ಳಬಹುದೆಂದು ಶ್ರೀರಾಮಕೃಷ್ಣರು ಹೀಗೆ ತೋರಿಸಿ ಕೊಟ್ಟರು.

ಶ್ರೀರಾಮಕೃಷ್ಣರ ಧರ್ಮಸಮನ್ವಯವನ್ನು ಕುರಿತು ವಿಲ್ ಡ್ಯುರೆಂಟ್ ತಮ್ಮ The Story of civilization (ಭಾಗ ೧, ಪು. ೬೧೬–೬೧೭) ಎಂಬ ಗ್ರಂಥದಲ್ಲಿ ಹೀಗೆ ಬರೆಯುತ್ತಾರೆ: ".... ಎಲ್ಲ ಧರ್ಮಗಳೂ ಒಳ್ಳೆಯವೇ ಎಂದು ಅವರು (ಶ್ರೀರಾಮ ಕೃಷ್ಣರು) ತಮ್ಮ ಅನುಯಾಯಿಗಳಿಗೆ ಬೋಧಿಸಿದರು; ಅನ್ವೇಷಕನ ಹೃನ್ಮನಗಳಿಗೆ ಹೊಂದಿಕೆಯಾಗುವ ಪ್ರತಿಯೊಂದೂ ಭಗವಂತನ

ಬಳಿಗೆ ಹೋಗುವ ಮಾರ್ಗವೇ ಅಥವಾ ಆ ಮಾರ್ಗದ ಒಂದು ಘಟ್ಟ. ಒಂದು ಧರ್ಮದಿಂದ ಇನ್ನೊಂದಕ್ಕೆ ಮತಾಂತರ ಗೊಳ್ಳುವುದು ಮೂರ್ಖತನ; ಪ್ರತಿಯೊಬ್ಬನೂ ತನ್ನದೇ ಆದ ಮಾರ್ಗದಲ್ಲಿ ಮುಂದುವರೆಯುತ್ತ ತನ್ನ ಧರ್ಮದ ತತ್ತ್ವವನ್ನು ಸಾಕ್ಷಾತ್ಕರಿಸಿಕೊಳ್ಳಬೇಕು. 'ಎಲ್ಲ ನದಿಗಳು ಸಾಗರವನ್ನು ಸೇರುತ್ತವೆ. ನೀವೂ ಸಾಗಿರಿ, ಇನ್ನೊಬ್ಬರೂ ಸಾಗಲಿ.' "

## ವೈಜ್ಞಾನಿಕ ಧರ್ಮ

ಶ್ರೀರಾಮಕೃಷ್ಣರು ತಮ್ಮ ಉಪದೇಶವನ್ನು ಅರ್ಥಮಾಡಿಕೊಂಡು, ಅದರ 'ತಲೆ–ಬಾಲ'ವನ್ನು ತೆಗೆದು ಹಾಕಿ ಸಾರವನ್ನು ಮಾತ್ರ ಸ್ವೀಕರಿಸುವಂತೆ ತಮ್ಮ ಶಿಷ್ಯರಿಗೆ ಹೇಳುತ್ತಿದ್ದರು. ತಮ್ಮ ಮಾತನ್ನು ಸುಮ್ಮನೆ 'ಗುಳುಂ' ಎಂದು ನುಂಗುತ್ತಿದ್ದ ಒಬ್ಬರನ್ನು ಅವರು ನಿಂದಿಸುತ್ತಾರೆ. ತಮ್ಮ ಉಪದೇಶಗಳಿಗೆ ತಕ್ಕಂಥ ಜೀವನ ಅವರದ್ದಾಗಿತ್ತು. ತಮ್ಮ ಜೀವನವು ತಮ್ಮ ಉಪದೇಶಕ್ಕೆ ಹೊಂದಿಕೆಯಾಗುವಂತೆ ಇದೆಯೇ ಎಂಬುದನ್ನು ಪರೀಕ್ಷಿಸಲು ಅವರು ಶಿಷ್ಯಂದಿರನ್ನು ಪ್ರೋತ್ಸಾಹಿಸುತ್ತಿದ್ದರು. ಅಕ್ಕಸಾಲಿಯೊಬ್ಬ ಚಿನ್ನವನ್ನು ಪರೀಕ್ಷಿಸುವಂತೆ ತಮ್ಮನ್ನು, ತಮ್ಮ ಮಾತನ್ನು ಪರೀಕ್ಷಿಸಬೇಕೆಂದು ಅವರು ಹೇಳುತ್ತಿದ್ದರು. ಸ್ವಾಮಿ ವಿವೇಕಾನಂದರು ಹಾಗೂ ಸ್ವಾಮಿ ಯೋಗಾನಂದರು ಅವರನ್ನು ಪರಿಪರಿಯಾಗಿ ಪರೀಕ್ಷಿಸಿದ ಘಟನೆಗಳು ನಮಗೆ ಅವರ ಜೀವನಚರಿತ್ರೆಯಲ್ಲಿಯೇ ಸಿಗುತ್ತವೆ. ಡಾ. ಮಹೇಂದ್ರನಾಥ ಸರ್ಕಾರ್ ಮತ್ತು ಇತರ ಪ್ರಸಿದ್ಧ ವೈದ್ಯರು ಶ್ರೀರಾಮಕೃಷ್ಣರ ಸಮಾಧಿ ಅವಸ್ಥೆಯನ್ನು ವೈದ್ಯವಿಜ್ಞಾನರೀತಿಯಲ್ಲಿ ಪರೀಕ್ಷೆಗೊಳಪಡಿಸಿದ್ದನ್ನೂ ನಾವು ಅವರ ಜೀವನಚರಿತ್ರೆಯಲ್ಲಿ ಓದುತ್ತೇವೆ.

ಈಗಿನ್ ವಿಗ್ನರ್ ಎಂಬ ಹಂಗೇರಿ ದೇಶದ ಭೌತಶಾಸ್ತ್ರ ವಿಜ್ಞಾನಿಯೊಬ್ಬರು ಶ್ರೀರಾಮಕೃಷ್ಣರ ಬಗ್ಗೆ ಹೀಗೆ ನುಡಿದಿದ್ದಾರೆ: "ಧಾರ್ಮಿಕ ಚಿಂತನೆಗಳ ಅಲೆಗಳು ಏರಿ ಇಳಿಯುತ್ತವೆ ಮತ್ತು ಎಲ್ಲದರ ಮೇಲೆ ಈ ಯುಗದ ಪ್ರವಾದಿಯಾಗಿ ಒಬ್ಬರು ನಿಂತಿದ್ದಾರೆ. ಅಂತಹ ವ್ಯಕ್ತಿಯಾದ ಶ್ರೀರಾಮಕೃಷ್ಣರು ವಿನಾಶಾತ್ಮಕವಲ್ಲದ, ರಚನಾತ್ಮಕವಾದ ಈ ಕಾಲದ ಧರ್ಮವನ್ನು ಬೋಧಿಸಲು ಬಂದಿದ್ದಾರೆ. ಮಾಹಿತಿಗಳನ್ನು ಸಂಗ್ರಹಿಸಲು ಅವರು ಹೊಸದಾಗಿ ಮತ್ತೊಮ್ಮೆ ಪ್ರಕೃತಿಯ ಮೊರೆಹೊಕ್ಕರು. ಆಗ ಅವರಿಗೆ ಎಂದಿಗೂ 'ನಂಬು' ಎನ್ನದಿರುವ, 'ಪ್ರತ್ಯಕ್ಷವಾಗಿ ಕಾಣು' ಎಂದು ಸಾರುವ ವೈಜ್ಞಾನಿಕ ಧರ್ಮವು ಲಭಿಸಿತು."

ಮುಂದೆ ಸ್ವಾಮಿ ವಿವೇಕಾನಂದರಿಂದ ಈ ಜಗತ್ತಿಗೆ ವೈಜ್ಞಾನಿಕ ಹಿನ್ನೆಲೆಯಲ್ಲಿ ಧರ್ಮದ ವ್ಯಾಖ್ಯಾನ ಲಭ್ಯವಾಯಿತು. ಧರ್ಮವೂ ಒಂದು ವಿಜ್ಞಾನ. ಹೇಗೆ ವಿಜ್ಞಾನದಲ್ಲಿ ಕೆಲವು ಪ್ರಯೋಗಗಳಿಂದ ಭೌತಿಕ ಪ್ರಪಂಚದ ಸತ್ಯಗಳ ಆವಿಷ್ಕಾರವಾಗುವುದೋ ಹಾಗೆಯೇ ಆಧ್ಯಾತ್ಮಿಕ ಪ್ರಪಂಚದಲ್ಲಿಯೂ ಸಹ ಹಲವು ಮಾರ್ಗಗಳನ್ನನುಸರಿಸಿ ವಿಜ್ಞಾನಿಯು ಆಂತರಿಕ ಸತ್ಯಗಳನ್ನು ಹುಡುಕುತ್ತಾನೆ ಎಂದು ವಿವೇಕಾನಂದರು ಬೋಧಿಸಿದರು.

**ಶ್ರೀರಾಮಕೃಷ್ಣರು ಆಡಿದ ಮಾತುಗಳ ಮೂಲಕ ಅವರ ಚಿಂತನೆಗಳಷ್ಟೇ ಪ್ರಕಟವಾಗಿಲ್ಲ. ಆ ಮೂಲಕ ಲಕ್ಷಗಟ್ಟಲೆ ಮಾನವರ ಶ್ರದ್ಧೆ ಮತ್ತು ವಿಶ್ವಾಸಗಳು ಹೊರಹೊಮ್ಮಿವೆ. ಇದನ್ನು ನಾವು ನೆನಪಿನಲ್ಲಿ ಇಟ್ಟುಕೊಂಡಾಗ, ಆ ದೇಶದ ಭವಿಷ್ಯದ ಬಗೆಗೆ ಆಶಾಭಾವನೆಯನ್ನು ತಳೆಯಬಹುದು.**

**–ಪ್ರೊ. ಮ್ಯಾಕ್ಸ್ ಮುಲ್ಲರ್**

## ಧರ್ಮಕ್ಕೆ ಮಾನವತೆಯ ಸ್ಪರ್ಶ

ಧರ್ಮವೆಂದರೆ ಇಂದ್ರಿಯಾತೀತವಾದ ಸತ್ಯವನ್ನು ತಿಳಿದುಕೊಳ್ಳುವ ಪ್ರಯತ್ನ. ಅದಕ್ಕೆ ಪ್ರಾಪಂಚಿಕತೆಯನ್ನು ಸಂಪೂರ್ಣವಾಗಿ ಬಿಡಬೇಕೆಂಬುದೂ ದಿಟ. ಸತ್ಯಸಾಕ್ಷಾತ್ಕಾರಕ್ಕಾಗಿ ಸಮಾಜವನ್ನು ತೊರೆದು ಕಾಡಿಗೆ ಹೋಗಿ ತಪಸ್ಸು ಮಾಡುವುದು ಹಿಂದಿನಿಂದ ಬಂದಂತಹ ರೂಢಿ. ತೀವ್ರ ವೈರಾಗ್ಯವಿಲ್ಲದೆ ಪ್ರಪಂಚತ್ಯಾಗ ಮಾಡಿದರೆ ಸಾಧಕನಾದವನಿಗೆ ಅದರಿಂದೇನೂ ಪ್ರಯೋಜನವಾಗದು. ಅಷ್ಟಲ್ಲದೆ ತನಗೆ ಇಷ್ಟರವರೆಗೆ ಆಶ್ರಯವನ್ನಿತ್ತ ಸಮಾಜದ ಒಳಿತನ್ನು ಸಾಧಿಸದ ಕಳಂಕವೂ ತಗಲುತ್ತದೆ. ಈ ಕೊರತೆಯನ್ನು ನೀಗಲು ಜಗತ್ತಿನ ಹಿತದ ಜೊತೆಜೊತೆಗೇ ವೈಯಕ್ತಿಕ ಆಧ್ಯಾತ್ಮಿಕ ಏಳ್ಗೆಯನ್ನು ಸಾಧಿಸಲು ಸ್ವಾಮಿ ವಿವೇಕಾನಂದರು 'ತ್ಯಾಗ ಮತ್ತು ಸೇವೆ', 'ಜೀವನಲ್ಲಿ ಶಿವನನ್ನೇ ಕಾಣುತ್ತ ಅವನ ಸೇವೆ ಮಾಡುವುದು', 'ತನ್ನ ಆಧ್ಯಾತ್ಮಿಕ ಹಿತ ಮತ್ತು ಜಗತ್ತಿನ ಹಿತವೆರಡೂ ಪೂರಕವಾಗಿರುವ ಕರ್ಮಯೋಗವನ್ನು ಆಶ್ರಯಿಸಿದ ಧರ್ಮ' – ಇವನ್ನು ಜಗತ್ತಿಗೆ ಬೋಧಿಸಿದರು. ಯಾವ ಧರ್ಮದಲ್ಲಿಯೂ ನಂಬಿಕೆಯಿಲ್ಲದವರೂ ಕೂಡ ಇದನ್ನೇ ತಮ್ಮ ಧರ್ಮವಾಗಿಸಿಕೊಳ್ಳಬಹುದು, ಮಾನವ ಹಿತಕ್ಕಾಗಿ ದುಡಿಯಬಹುದು, ತನ್ಮೂಲಕ ತಮ್ಮ ಮಾನಸಿಕ ಪರಿಶುದ್ಧತೆಯನ್ನು ಪಡೆಯಬಹುದು ಎಂಬುದಾಗಿ ಬೋಧಿಸಿದರು. ಅದು ಕಾಡಿನ ವೇದಾಂತಧರ್ಮವಾಗಿರಲಿಲ್ಲ. ಪ್ರತಿಯೊಂದು ಮನೆಯಲ್ಲೂ, ಪ್ರತಿಯೊಂದು ದೇಶದಲ್ಲಿಯೂ, ಪ್ರತಿಯೊಂದು ವರ್ಣದ ಜನರಿಂದಲೂ ಆಚರಿಸಬಹುದಾದ ಮಾನವ ಧರ್ಮ ಮತ್ತು ಅನುಷ್ಠಾನಸಾಧ್ಯವಾದ ಧರ್ಮವಾಗಿದ್ದಿತು.

ಪ್ರಸಿದ್ಧ ಚರಿತ್ರಕಾರರೂ, ತತ್ತ್ವಶಾಸ್ತ್ರಜ್ಞರೂ ಆದ ವಿಲ್ ಡ್ಯುರೆಂಟರ ಮಾತಿನಲ್ಲಿ ಹೇಳುವುದಾದರೆ, "....ಅವರು (ಶ್ರೀರಾಮಕೃಷ್ಣರು) ಜನರ ಅನೇಕದೇವತಾವಾದವನ್ನು ಸಹಾನುಭೂತಿಯಿಂದ ಸಹಿಸಿದರು, ತತ್ತ್ವಶಾಸ್ತ್ರಜ್ಞರ ಏಕದೇವವಾದವನ್ನೂ ನಮ್ರತೆಯಿಂದ ಒಪ್ಪಿಕೊಂಡರು; ಆದರೆ, ಭಗವಂತನು ಎಲ್ಲ ಮನುಷ್ಯರಲ್ಲಿ ಆವಿರ್ಭವಿಸಿರುವುದಾಗಿಯೂ ಮತ್ತು ಮಾನವತೆಗೆ ಪ್ರೀತಿಯಿಂದ ಸೇವೆ ಸಲ್ಲಿಸುವುದು ಮಾತ್ರವೇ ಭಗವಂತನ ನಿಜವಾದ ಪೂಜೆಯೆಂಬುದೂ ಅವರ ಜೀವಂತ ಧರ್ಮವಾಗಿತ್ತು" (ನೋಡಿ. The Story of Civilization vol ೧. ಪು. ೬೧೬–೬೧೭).

### ವಿವಾಹದ ಮಹದುದ್ದೇಶ

ಇತ್ತೀಚೆಗೆ ಅಮೇರಿಕದಂತಹ ಪಾಶ್ಚಾತ್ಯ ದೇಶಗಳಲ್ಲಿ ವಿವಾಹ ವೆಂಬ ಪವಿತ್ರ ಪದ ಅರ್ಥಹೀನವಾಗುತ್ತ ಬರುತ್ತಿದೆ. ಕೆಲವೆಡೆ ಗಂಡು ಹೆಣ್ಣು ಪರಸ್ಪರ ವಿವಾಹವಾಗದೆ ಜೊತೆಗಿರುವುದು ಜೀವನ ಶೈಲಿಯಾಗುತ್ತಿದೆ. ಅವರ ಜೀವನಶೈಲಿಯನ್ನು ಕಣ್ಣುಮುಚ್ಚಿ ಅನುಕರಿಸುತ್ತಿರುವ ಭಾರತೀಯರಲ್ಲೂ ಈ ಪದ್ಧತಿ ಕಾಲಿಡುತ್ತಿದೆ ಯೆಂಬುದು ವಿಷಾದದ ಸಂಗತಿಯೇ ಸರಿ. ಲೌಕಿಕ ಸುಖಕಷ್ಟೇ ವಿವಾಹ ಸೀಮಿತವಾಗಿಲ್ಲವೆಂದು ಜಗತ್ತಿಗೆ ತೋರಿಸಿ ಕೊಡಲೆಂದೇ ಶ್ರೀರಾಮಕೃಷ್ಣರು ಶ್ರೀಶಾರದಾದೇವಿಯವರನ್ನು ಮದುವೆ ಯಾದದ್ದು. ಮಾನವ ಜೀವನದ ಉತ್ಕೃಷ್ಟ ಧ್ಯೇಯವಾದ ಭಗವತ್ಸಾಕ್ಷಾತ್ಕಾರಕ್ಕೆ ಪತಿ–ಪತ್ನಿಯರಿಬ್ಬರೂ ಪರಸ್ಪರ ಸಹಕಾರ ನೀಡುವುದರೊಂದಿಗೆ ವಿವಾಹವು ಸಾರ್ಥಕತೆಯನ್ನು ಪಡೆಯು ತ್ತದೆ. ಮಾನವನಲ್ಲಿರುವ ಪಶುವಿಗೆ ಕಡಿವಾಣ ಹಾಕುವುದಷ್ಟೆ ವಿವಾಹಜೀವನದ ಧ್ಯೇಯವಾಗಿರದೆ, ಅವನನ್ನು ದೈವತ್ವಕ್ಕೆ ಏರಿಸುವುದಕ್ಕೂ ಅದು ಸಹಾಯ ಮಾಡಬೇಕು. ಶ್ರೀರಾಮಕೃಷ್ಣರ ಜೀವನದಲ್ಲಿ ನಾವಿದನ್ನು ಕಾಣಬಹುದು.

ಯಾವುದೇ ಒಂದು ನಾಗರಿಕತೆಯ ಅಧಃಪತನ ಮತ್ತು ನಾಶಕ್ಕೆ ಬ್ರಹ್ಮಚರ್ಯದ ಕೊರತೆಯೂ ಕಾರಣವಾಗಿರುತ್ತದೆ. ರಾಮಕೃಷ್ಣ ಲೀಲಾಪ್ರಸಂಗದ ಕರ್ತೃವಾದ ಸ್ವಾಮಿ ಶಾರದಾ ನಂದರು ಈ ವಿಷಯವನ್ನು ಕೂಲಂಕಷವಾಗಿ ಪ್ರಸ್ತಾಪಿಸಿದ್ದಾರೆ. ಅವರು ಬರೆಯುತ್ತಾರೆ: "…. ವೈವಾಹಿಕ ಜೀವನದಲ್ಲಿ ಇಂದ್ರಿಯತೃಪ್ತಿಗಿಂತಲೂ ಭಿನ್ನವಾದ ಬೇರೊಂದು ಮಹೋದ್ದೇಶ ವಿದೆ ಎಂಬುದನ್ನು ನಾವು ಮರೆತಿದ್ದೇವೆ. ದಿನದಿನವೂ ನಾವು ಪಶುಸಮಾನರಾಗುತ್ತಿದ್ದೇವೆ. ಆಧುನಿಕ ನರನಾರಿಯರ ಈ ಪಶುಪ್ರವೃತ್ತಿಯನ್ನು ನಿವಾರಿಸುವುದಕ್ಕಾಗಿಯೇ ಲೋಕಗುರುವಾದ ಶ್ರೀರಾಮಕೃಷ್ಣರು ವಿವಾಹವಾದುದು. ಅವರ ಜೀವನದ ಎಲ್ಲ ಕಾರ್ಯಗಳಂತೆಯೇ ವಿವಾಹವೂ ಕೂಡ ಲೋಕಕಲ್ಯಾಣಾರ್ಥ ವಾಗಿಯೇ" (ಶ್ರೀರಾಮಕೃಷ್ಣ ಲೀಲಾಪ್ರಸಂಗ ಭಾಗ ೧,. ಪು. ೪೬೧). "…..ಯಾವುದೋ ಕಾರಣದಿಂದಾಗಿ ತುಚ್ಛ ಶಾರೀರಿಕ ಸಂಬಂಧವು ಹೊರಟುಹೋದರೆ ಎಷ್ಟು ಜನರು ತಮ್ಮ ಪತ್ನಿಯನ್ನು ಈ ರೀತಿ ಗೌರವಿಸಿ ನಿಃಸ್ವಾರ್ಥ ಪ್ರೀತಿಯಿಂದ ನೋಡಿಕೊಳ್ಳಬಲ್ಲರು? ಆದ್ದರಿಂದ ಯುಗಾವತಾರರಾದ ಶ್ರೀರಾಮ ಕೃಷ್ಣರು ವಿವಾಹ ಮಾಡಿಕೊಂಡದ್ದು ಗೃಹಸ್ಥರಿಗಾಗಿಯೇ. ಸ್ವಲ್ಪವೂ ಶರೀರ ಸಂಬಂಧವಿಲ್ಲದೆ ಅವರು ಪತ್ನಿಯನ್ನು ಪ್ರೀತಿಸಿ ಒಂದು ಉಜ್ವಲ ಆದರ್ಶವನ್ನು ನಿಮ್ಮ ಮುಂದೆ ಇಟ್ಟಿರುವರು….. ಉಚ್ಚ ಆದರ್ಶವನ್ನು ಇಟ್ಟುಕೊಂಡು ಪತಿ–ಪತ್ನಿಯರು ಸಾಧ್ಯವಾದಷ್ಟು ಬ್ರಹ್ಮಚರ್ಯವನ್ನು ಪಾಲಿಸುತ್ತ ಜೀವನ ನಡೆಸಿದರೆ ಅವರೂ ಧನ್ಯರಾಗಬಹುದು, ಮೇಧಾವಿಗಳೂ ತೇಜಸ್ವಿಗಳೂ ಆದ ಮಕ್ಕಳನ್ನು ಪಡೆದು ವರ್ತಮಾನ ಭಾರತವನ್ನು ಈ ಹೀನಸ್ಥಿತಿ ಯಿಂದ ಮುಕ್ತಗೊಳಿಸಬಹುದು–ಇದೇ ಅವರ ವಿವಾಹದ ಹಿಂದೆ ಇದ್ದ ಉದ್ದೇಶ" (ಅಲ್ಲೇ ಪು.೪೬೩). ಸಾಧಕರಾದ ಪತಿ–ಪತ್ನಿ ಯರಿಗೆ ಶ್ರೀರಾಮಕೃಷ್ಣರು "ಒಂದೆರಡು ಮಕ್ಕಳಾದ ನಂತರ ಪತಿ –ಪತ್ನಿಯರು ಅಣ್ಣ–ತಂಗಿಯರಂತಿರಬೇಕು" ಎಂದು ಉಪದೇಶ ವೀಯುತ್ತಿದ್ದರು. ತಮ್ಮ ಪತ್ನಿಯನ್ನು ದೇವಿಯ ಸ್ಥಾನದಲ್ಲಿಟ್ಟು ಪೂಜಿಸುವುದರ ಮೂಲಕ ಹೆಣ್ಣು ಕೇವಲ ಭೋಗವಸ್ತುವಲ್ಲ, ಜಗನ್ಮಾತೆಯ ಅಂಶವೆಂಬುದಾಗಿ ಅವರು ತೋರಿಸಿಕೊಟ್ಟಿದ್ದಾರೆ. ಅವರು ತಮ್ಮ ಪತ್ನಿಯನ್ನು 'ನೀವು' ಎಂಬ ಗೌರವವಾಚಕ ಶಬ್ದದೊಂದಿಗೆ ಸಂಬೋಧಿಸುತ್ತಿದ್ದರು. ಒಮ್ಮೆ ಯಾವುದೊ ಸಂದರ್ಭದಲ್ಲಿ 'ನೀನು' ಎಂದು ಕರೆದಿದ್ದಕ್ಕೆ ಅತ್ಯಂತ ಉದ್ವಿಗ್ನರಾಗಿ, ತಮ್ಮ ಪತ್ನಿಯ ಕ್ಷಮಾಪಣೆ ಕೇಳುವವರೆಗೂ ಅವರಿಗೆ ಸಮಾಧಾನ ವಾಗಲಿಲ್ಲ. ಹೀಗೆ ತಮ್ಮ ಪತ್ನಿಯೊಂದಿಗೆ ಅವರು ಇರಿಸಿ ಕೊಂಡಿದ್ದ ಸಂಬಂಧ ಆಧುನಿಕರಿಗೆ ಮಾದರಿಯಾಗಿದೆ.

### ವಿಶ್ವಮಾನವ ವ್ಯಕ್ತಿತ್ವ

ಕ್ರಿಸ್ಟೋಫರ್ ಇಶರ್‌ವುಡ್, Vedanta for the Modern Man ಎಂಬ ಗ್ರಂಥದ ಮುನ್ನುಡಿಯಲ್ಲಿ ಹೀಗೆ ಹೇಳುತ್ತಾರೆ: "ತಮ್ಮ ಎಲ್ಲ ಪಾಶ್ಚಾತ್ಯ ಅನುಯಾಯಿಗಳು ಹಿಂದೂಗಳಾಗ ಬೇಕೆಂಬುದನ್ನು ರಾಮಕೃಷ್ಣರು ಸುತರಾಂ ಒಪ್ಪುವುದಿಲ್ಲ. ಕಾಲ ಕಳೆದಂತೆ, ಯೇಸು ಕ್ರಿಸ್ತನು ತನ್ನ ಯಹೂದಿ ಛಾಯೆಯನ್ನು ಕಳೆದುಕೊಂಡಂತೆ ರಾಮಕೃಷ್ಣರ ವ್ಯಕ್ತಿತ್ವವೂ ನಿಧಾನವಾಗಿ ತನ್ನ ಭಾರತೀಯತೆಯನ್ನು ಕಳೆದುಕೊಳ್ಳುವುದು…." ಶ್ರೀರಾಮಕೃಷ್ಣರ ವ್ಯಕ್ತಿತ್ವವು ಎಲ್ಲ ಮತಗಳನ್ನಷ್ಟೆ ತನ್ನದಾಗಿಸಿಕೊಂಡಿರಲಿಲ್ಲ; ಎಲ್ಲ ಸಂಸ್ಕೃತಿಗಳನ್ನೂ ತನ್ನದಾಗಿಸಿಕೊಂಡಿತ್ತು. ಅವರ ಹೆಸರಿನಲ್ಲಿ ಸ್ವಾಮಿ ವಿವೇಕಾನಂದರು ಸ್ಥಾಪಿಸಿರುವ ರಾಮಕೃಷ್ಣ ಮಹಾ ಸಂಘವು ಜಗತ್ತಿನ ಎಲ್ಲೆಡೆಗಳಲ್ಲಿ ವಿವಿಧ ವರ್ಗಗಳ, ವಿವಿಧ ಜಾತಿಗಳ, ವಿವಿಧ ಸಂಸ್ಕೃತಿಗಳ, ವಿವಿಧ ವರ್ಣಗಳ ಜನ ರಲ್ಲಿ ಬೆರೆತು ವಿಶ್ವದ ಒಳಿತಿಗಾಗಿ ಸೇವೆ ಸಲ್ಲಿಸುತ್ತಿದೆ. ಸಿಲ್ವೆನ್ ಲೆವಿ ಎಂಬ ಫ್ರಾನ್ಸ್ ದೇಶದ ಪೌರಸ್ತ್ಯಶಾಸ್ತ್ರದ ವಿದ್ವಾಂಸರು ಹೇಳುತ್ತಾರೆ, "ಶ್ರೀರಾಮಕೃಷ್ಣರ ಹೃನ್ಮನಗಳು ಎಲ್ಲ ದೇಶಗಳಿಗೂ ಸೇರಿದಂತೆ, ಅವರ ಹೆಸರೂ ಕೂಡ ಇಡೀ ಮಾನವಕುಲಕ್ಕೆ ಸೇರಿದ ಸ್ವತ್ತಾಗಿದೆ" (The Cultural Heritage of India, vol 2, p.539).

ಹೀಗೆ ಸಮಸ್ತ ಮನುಕುಲವು ತಾವೆಲ್ಲರೂ ಆ ಒಂದೇ ಭಗವಂತನ ಮಕ್ಕಳು ಎಂಬ ಅನುಭವ ಪಡೆಯುವವರೆಗೂ ಶ್ರೀರಾಮಕೃಷ್ಣ ಎಂಬ ಆ ವಿಶ್ವಮಾನವ ವ್ಯಕ್ತಿತ್ವ ಎಲ್ಲರನ್ನೂ ಆ ಗುರಿಯತ್ತ ಧಾವಿಸುವಂತೆ, ಪ್ರತ್ಯಕ್ಷವಾಗಿ ಪರೋಕ್ಷವಾಗಿ ಪ್ರೋತ್ಸಾಹಿಸುತ್ತದೆ, ಮಾರ್ಗದರ್ಶನ ನೀಡುತ್ತದೆ. ಇದೊಂದೇ ವರ್ತಮಾನ ಜಗತ್ತಿನ ಪ್ರಕ್ಷುಬ್ಧ ಪರಿಸ್ಥಿತಿಗೆ ಆಶಾದೀಪವಾಗಿದೆ.